# ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಅಧೀಕ್ಷಕ ಇಂಜನೀಯರರವರ ಕಛೇರಿ
ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
ನಿರ್ವಹಣೆ ಮತ್ತು ಪೋಷಣೆ ವೃತ್ತ ಸಂ:1
ನಾರಾಯಣಪುರ.-585219
ತಾಲೂಕು: ಹುಣಸಗಿ

ಎಸ್.ಟಿ.ಡಿ. ಸಂ:08444
ಫ್ಯಾಕ್ಸ್ & ಪೋನ್ ಸಂ: 229635
Office email: se_omcn@Yahoo.com

ಸುವರ್ಣ ಕರ್ನಾಟಕ-2006

ಸಂ:ಕೃಭಾಜನಿನಿ:ನಿಮಪೋ:ವೃತ್ತ ಸಂ:1:ನಾ:ಪೂರ:ಪಿಬಿ-1/2020-2021: 1251 ದಿನಾಂಕ: 17-07-2020

## ಪ್ರಕಟಣೆ

ವಿಷಯ:- 2020-21ನೇ ಸಾಲಿನ ಮುಂಗಾರು ಹಂಗಾಮಿಗೆ ನಾರಾಯಣಪೂರ ವೃತ್ತ ಸಂ-1 ರಡಿಯಲ್ಲಿ ಬರುವ ಕಾಲುವೆ ಜಾಲಕ್ಕೆ ನೀರಾವರಿಗಾಗಿ ನೀರು ಹರಿಸುವ ಕುರಿತು.

ಉಲ್ಲೇಖ:- ದಿನಾಂಕ: 13.07.2020 ರಂದು ಜರುಗಿದ 2020-21ನೇ ಸಾಲಿನ ಮುಂಗಾರು ಹಂಗಾಮಿನ ನೀರಾವರಿ ಸಲಹಾ ಸಮಿತಿ ಸಭೆಯ ಕುರಿತು ಕಛೇರಿ ಟಿಪ್ಪಣಿಯ ಅನುಮೋದಿತ ಅಂಶಗಳ ಅನುಸಾರ.

-----

ಕೃಷ್ಣಾ ಮೇಲ್ದಂಡೆ ಯೋಜನೆಯ 2020-21ನೇ ಸಾಲಿನ ಮುಂಗಾರು ಹಂಗಾಮಿನ ನೀರಾವರಿ ಸಲಹಾ ಸಮಿತಿಯ ಸಭೆಯನ್ನು ಜುಲೈ ತಿಂಗಳಿನಲ್ಲಿ ಜರುಗಿಸಬೇಕಾಗಿತ್ತು. ಆಲಮಟ್ಟಿ ಬಸವಸಾಗರ ಜಲಾಶಯಗಳಲ್ಲಿ ಮುಂಗಾರು ಹಂಗಾಮಿಗೆ ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಲುವೆ ಜಾಲಗಳಿಗೆ ನೀರಾವರಿಗಾಗಿ ಬೇಕಾಗಿರುವ ನೀರು ಸಂಗ್ರಹಣೆಯಾಗಿರುವುದರಿಂದ ಹಾಗೂ ಕೋವಿಡ್-19 ಸಾಂಕ್ರಾಮಿಕ ರೋಗ ಹರಡಿರುವ ಹಿನ್ನೆಲೆಯಲ್ಲಿ ನೀರಾವರಿ ಸಲಹಾ ಸಮಿತಿ ಸಭೆಯನ್ನು ಜರುಗಿಸಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ದಿನಾಂಕ 13.07.2020 ರಂದು ಸನ್ಮಾನ್ಯಶ್ರೀ. ಗೋವಿಂದ ಕಾರಜೋಳ ಮಾನ್ಯ ಉಪ ಮುಖ್ಯ ಮಂತ್ರಿಗಳು, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಸಚಿವರು ಮತ್ತು ಬಾಗಲಕೋಟ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕೃಮೇ.ಯೋಜನೆ ನೀರಾವರಿ ಸಲಹಾ ಸಮಿತಿ ಅಧ್ಯಕ್ಷರು, ಇವರಿಂದ 2020-21ನೇ ಸಾಲಿನ ಮುಂಗಾರು ಹಂಗಾಮಿಗೆ ದಿನಾಂಕ 20.07.2020 ರ ಒಳಗೆ ಕಾಲುವೆ ಜಾಲಕ್ಕೆ ನೀರು ಹರಿಸುವ ಪೂರ್ವದಲ್ಲಿ ಪ್ರಸ್ತುತ ಸಾಲಿನ ಕ್ಲೋಜರ್ ಹಾಗೂ ವಿಶೇಷ ದುರಸ್ತಿ ಕಾಮಗಾರಿಗಳನ್ನು ಪೂರ್ಣಗೊಳಿಸಿಕೊಂಡು ದಿನಾಂಕ 21.07.2020 ರಿಂದ ನಾರಾಯಣಪೂರ ಎಡದಂಡೆ ಕಾಲುವೆ, ರಾಂಪೂರ ಏತ ನೀರಾವರಿ ಯೋಜನೆ ಹಾಗೂ ನಾರಾಯಣಪೂರ ಬಲದಂಡೆ ಕಾಲುವೆ ಜಾಲದಲ್ಲಿ ನೀರಾವರಿಗಾಗಿ ನೀರು ಹರಿಸುವುದು ನಿರ್ಧರಿಸಲಾಗಿರುತ್ತದೆ.

ಮುಖ್ಯ ಇಂಜಿನೀಯರರು, ಕೃಭಾಜನಿ ನಿಯಮಿತ ಕಾರ್ಯಾಚರಣೆ ಮತ್ತು ನಿರ್ವಹಣೆ ವಲಯ ನಾರಾಯಣಪೂರ ಇವರು ಕಛೇರಿ ಟಿಪ್ಪಣಿ ಅಂಶಗಳನ್ವಯ ತಮ್ಮ ಆಧೀನದ ಅಧಿಸೂಚಿತ ಅಚ್ಚುಕಟ್ಟು ಪ್ರದೇಶಕ್ಕೆ ಮುಂಗಾರು ಹಂಗಾಮಿಗೆ ನೀರಾವರಿಗಾಗಿ ನೀರು ಹರಿಸುವ ಕುರಿತು ಪ್ರಚೂರಪಡಿಸಲು ನಿರ್ದೇಶಿಸಿರುವದು. ಆಲಮಟ್ಟಿ ಹಾಗೂ ಬಸವಸಾಗರ ಜಲಾಶಯಗಳಿಗೆ ಒಳಹರಿವು ಸ್ಥಗಿತವಾಗುವವರೆಗೆ ಚಾಲು ಬಂದ ಪದ್ಧತಿ ಅನುಸರಿಸದೇ ಸತತವಾಗಿ ಕಾಲುವೆ ಜಾಲಕ್ಕೆ ನೀರನ್ನು ಮಳೆ ಆಧರಿಸಿ ಮುಂಗಾರು ಹಂಗಾಮಿಗೆ ಪೂರೈಸಲಾಗುವುದು. ತದನಂತರ ಬಾಕಿ ಉಳಿದಿರುವ ದಿನಗಳಿಗೆ, ಕೋವಿಡ್-19 ರ ಸ್ಥಿತಿಗತಿಯನ್ನು ಗಮನಿಸಿಕೊಂಡು, ನೀರಾವರಿ ಸಲಹಾ ಸಮಿತಿ ಜರುಗಿಸಿ ಚಾಲೂ-ಬಂದ್ ಪದ್ಧತಿಯನ್ನು ಅನುಸರಿಸಲಾಗುವುದು ಅಥವಾ ಈ ಹಿಂದೆ ಹಿಂಗಾರು ಹಂಗಾಮಿಗೆ ಈ ವೃತ್ತದ ಕಾಲುವೆ ಜಾಲಕ್ಕೆ ಅನುಸರಿಸಿದ 8 ದಿನ ಚಾಲೂ ಹಾಗೂ 7 ದಿನ ಬಂದ ಪದ್ಧತಿಯನ್ನು ಅನುಸರಿಸಲಾಗುವುದು. ಉಲ್ಲೇಖಿತ ಪತ್ರದ ನಿರ್ಣಯದಂತೆ ಈ ವೃತ್ತದಡಿಯಲ್ಲಿ ಬರುವ ನಾರಾಯಣಪೂರ ಎಡದಂಡೆ ಕಾಲುವೆ ಕಿ.ಮೀ. 0.00 ರಿಂದ 77.00 ವರೆಗೆ ವಿತರಣಾ ಕಾಲುವೆ ಸಂಖ್ಯೆ 1 ರಿಂದ 25 ರ ವರೆಗೆ ರಾಂಪೂರ ಏತ ನೀರಾವರಿ ಯೋಜನೆಯ ಹಾಗೂ ನಾರಾಯಣಪೂರ ಬಲದಂಡೆ ಕಾಲುವೆಗಳಿಗೆ 2020-21ನೇ ಸಾಲಿನ ಮುಂಗಾರು ಹಂಗಾಮಿಗೆ ದಿನಾಂಕ 21.07.2020 ರಿಂದ ನೀರಾವರಿಗಾಗಿ ಮಳೆ ಆಧರಿಸಿ ನೀರು ಹರಿಸಲಾಗುತ್ತದೆ

Scanned with CamScanner

ಕಾಲುವೆ ಜಾಲದ ಗೇಟ್‌ಗಳು ಹಾನಿ ಮಾಡುವುದು ಅನಧಿಕೃತವಾಗಿ ಎಸ್ಕೇಪ್‌ಗಳ ಮೂಲಕ ಹಳ್ಳಕ್ಕೆ ನೀರು ಹರಿಸುವುದು ಸೈಪನ್‌ಗಳ ಮೂಲಕ ಮಣ್ಣಿನ ಏರಿಯಲ್ಲಿ ನೀರನ್ನು ಎತ್ತಿಕೊಳ್ಳುವುದು, ಕಾಲುವೆ ಜಾಲದಲ್ಲಿ ಪಂಪುಗಳ ಮೂಲಕ ನೀರನ್ನು ಎತ್ತುವುದನ್ನು ನೀರಾವರಿ ಕಾಯ್ದೆಯಡಿ ನಿರ್ಭಂದಿಸಲಾಗಿದೆ. ಈ ಪರಿಸ್ಥಿತಿ ಕಂಡು ಬಂದರೆ ಸಂಬಂಧಿಸಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು. ರೈತ ಬಾಂಧವರು ಕೃಷ್ಣಾ ಮೇಲ್ದಂಡೆ ಯೋಜನೆ ಅಚ್ಚುಕಟ್ಟು ಪ್ರದೇಶದಲ್ಲಿ ಲಘು ನೀರಾವರಿ ಬೆಳೆಗಳನ್ನು ಮಾತ್ರ ಬೆಳೆಯಲು ವಿನಂತಿಸಲಾಗಿದೆ.

ರೈತ ಬಾಂಧವರು ನೀರಿನ ಬಳಕೆಯಲ್ಲಿ ಮಿತವ್ಯಯ ಸಾಧಿಸಲು ಹಾಗೂ ಈ ನಿಟ್ಟಿನಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ಅಧಿಕಾರಿಗಳಿಗೆ ಸಹಕಾರ ನೀಡಲು ಈ ಮೂಲಕ ಕೋರಲಾಗಿದೆ.

**"ಇದನ್ನು ಅಚ್ಚುಕಟ್ಟು ಪ್ರದೇಶದ ರೈತ ಬಾಂಧವರ ಹಿತದೃಷ್ಟಿಯಿಂದ ಪ್ರಕಟಿಸಲಾಗಿದೆ."**

ಸಹಿ/-
(ಶ್ರೀ. ಎಸ್.ಎಚ್.ನಾಯಕೋಡಿ)
ಕಾರ್ಯನಿರ್ವಾಹಕ ಇಂಜಿನೀಯರರು
ಕೃಭಾಜನಿನಿ ಆಣೆಕಟ್ಟು ವಿಭಾಗ
ನಾರಾಯಣಪೂರ
(9380581060)

ಸಹಿ/-
(ಶ್ರೀ. ಸುರೇಂದ್ರಬಾಬು)
ಕಾರ್ಯನಿರ್ವಾಹಕ ಇಂಜಿನೀಯರರು
ಕೃಭಾಜನಿನಿ ನಾಎದಂ ಕಾಲುವೆ ವಿಭಾಗ
ರೋಡಲಬಂಡಾ
(9449404921)

ಸಹಿ/-
(ಶ್ರೀ. ವೆಂಕಟೇಶಲು)
ಕಾರ್ಯನಿರ್ವಾಹಕ ಇಂಜಿನೀಯರರು
ಕೃಭಾಜನಿನಿ ನಾಬದಂ ಕಾಲುವೆ ವಿಭಾಗ ಸಂ-5
ರೋಡಲಬಂಡಾ
(7349677126)

ಸಹಿ/-
(ಶ್ರೀ. ಎಸ್.ಎಚ್. ನಾಯಕೋಡಿ)
ಕಾರ್ಯನಿರ್ವಾಹಕ ಇಂಜಿನೀಯರರು
ಕೃಭಾಜನಿನಿ ನಾಎದಂಕಾ ವಿಭಾಗ
ಹುಣಸಗಿ
(9380581060)

ಸಹಿ/-
(ಶ್ರೀ. ಎಸ್. ರಂಗರಾಮ್)
ಅಧೀಕ್ಷಕ ಇಂಜಿನೀಯರರು
ಕೃಭಾಜನಿನಿ ನಿ.ಮ.ಪೋ.ವೃತ್ತ-1
ನಾರಾಯಣಪೂರ
(9483545669)

Scanned with CamScanner